ಅಯ್ಯನ ಸರಗೂರು ಮಠದ ಇತಿಹಾಸ

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಬಿ.ಜಿ.ಪುರ ಹೋಬಳಿಯ ಸರಗೂರು ಗ್ರಾಮವು ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು, ಶರಣರು ಜನಿಸಿದ ಸ್ಥಳವಾಗಿದೆ. ಈಶಾನ್ಯ ದಿಕ್ಕಿಗೆ ಐದು ಕಿಲೋಮೀಟರ್ ದೂರದಲ್ಲಿ ಇರುವ ಕುಂದೂರು ಬೆಟ್ಟದ ಶ್ರೀ ರಸಸಿದ್ದೇಶ್ವರ, ದಕ್ಷಿಣ ದಿಕ್ಕಿನಲ್ಲಿ ಮೂರು ಕಿಲೋಮೀಟರ್ ದೂರದಲ್ಲಿ ಬರುವ ಶ್ರೀ ಮುಡುಕುತೊರೆಯ ಶ್ರೀ ಭ್ರಮರಾಂಭ ಸಹಿತ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಗಚಾರಣ್ಯ ಕ್ಷೇತ್ರ ಹಾಗೂ ವಾಯುವ್ಯ ದಿಕ್ಕಿನಲ್ಲಿ ಸುಮಾರು ಎಂಟು ಕಿಲೋಮೀಟರ್ ದೂರದಲ್ಲಿ ಶ್ರೀವಡ್ಡಲ್ ರಂಗನಾಥಸ್ವಾಮಿ ಕ್ಷೇತ್ರಗಳ ಮಧ್ಯ ಬರುವ ಇತಿಹಾಸವುಳ್ಳ ಕ್ಷೇತ್ರವಾಗಿದೆ. ಇತಿಹಾಸದ ಪ್ರಕಾರ ಶಾಪಕ್ಕೆ ಗುರಿಯಾಗಿದ್ದು ಮೂಲ ವೈಷ್ಣವರಾಗಿದ್ದ ಶ್ರೀ ಸರಗೂರಪ್ಪ ಮತ್ತು ಗೌರಮ್ಮ ದಂಪತಿಗಳು ಶಾಪವಿಮೋಚನೆಗಾಗಿ ಶ್ರೀ ಪರಶಿವನಿಂದ ಅನುಗ್ರಹ ಪಡೆದು ಭೂಲೋಕದ ಸರಗೂರಿನಲ್ಲಿ ಜನ್ಮತಾಳಿದ್ದಾಗಿ ತಿಳಿಯುತ್ತದೆ.

ಸರಗೂರು ಗ್ರಾಮದ ಮೂಲಪುರುಷರಾದ ಶ್ರೀ ಸರಗೂರಪ್ಪ ಮತ್ತು ಗೌರಮ್ಮರವರ ಕಾಲ ಇಂದಿಗೂ ಸ್ಪಷ್ಟವಾಗಿಲ್ಲ ಆದರೆ ಇತಿಹಾಸದ ಪ್ರಕಾರ ಶ್ರೀ ಮಲೆಮಹದೇಶ್ವರರು ಇದ್ದ ಕಾಲವೆಂಬುದು ತಿಳಿಯುತ್ತದೆ. ದಂಪತಿಗಳಿಗೆ ಒಟ್ಟು ಏಳು ಜನ ಗಂಡು ಮಕ್ಕಳಿದ್ದು ಅವರಲ್ಲಿ ಕೊನೆಯ ಮಗನಾದ ದೈವಾಂಶ ಸಂಬೂತರಾದ ಮತ್ತು ಇತಿಹಾಸದ ಪ್ರಕಾರ ಹುಟ್ಟುವಾಗಲೇ ಎದೆಯಲ್ಲಿ ದಿವ್ಯ ಪಂಚಕಳಸದೊಂದಿಗೆ ಜನ್ಮವೆತ್ತಿದ ಶ್ರೀ ಮೂಗಪ್ಪ (ವತಾತಿನಲ್ಲಿ ಮಿತವಾಗಿದ್ದರಿಂದ) ಗುಣದಲ್ಲಿ ನಿಜವುಳ್ಳವನ್ನಾಗಿದ್ದರಿಂದ ನಿಜಗುಣ ಹಾಗೂ ಪರಶಿವನಿಗೆ ಪ್ರಿಯವಾದ ಭಕ್ತನಾದ್ದರಿಂದ ಶಂಕರಪ್ರಿಯ ಎಂಬ ಹೆಸರುಗಳು ಇದ್ದದ್ದು ಇತಿಹಾಸದಲ್ಲಿ ಉಲ್ಲೇಖವಿದೆ.

ಇವರು ವೈಷ್ಣವರಾಗಿ ತ್ರೀ ಬಿಳಿಗಿರಿ ರಂಗಸ್ವಾಮಿಯನ್ನು ಹೂಜಿಸುತ್ತಿದ್ದು ಇವರ ಭಕ್ತಿಯಿಂದ ಪ್ರೇರೇಪಿತರಾಗಿ ಮುಡುಕುತೊರೆ ಶ್ರೀ ಮಲ್ಲಿಕಾರ್ಜುನ

ಸ್ವಾಮಿಯವರು ಸಹ ಇವರನ್ನು ಒಕ್ಕಲು ಪಡೆದು ಪೂಜೆಗೊಳ್ಳುತ್ತಿದ್ದದ್ದು ಸಹ ಉಲ್ಲೇಖವಿದ್ದು, ವೈಷ್ಣವ ಮತ್ತು ಶೈವ ಪರಂಪರೆಯ ದೇವರುಗಳನ್ನು ಪೂಜೆ ಮಾಡುತ್ತಿದ್ದ ಏಕಮಾತ್ರ ಭಕ್ತರಾಗಿದ್ದರು.

ಇವರ ಭಕ್ತಿಯನ್ನು ಮೆಚ್ಚಿ "ಶ್ರೀ ಮಲೆಮಹದೇಶ್ವರಸ್ವಾಮಿಯವರು ಇವರನ್ನು ತನ್ನ ಎಣ್ಣೆಮಜ್ಜನಕ್ಕೆ ಒಕ್ಕಲು ಪಡೆಯಲು ಸಂಕಲ್ಪ ಮಾಡಿ ಸರಗೂರಿಗೆ ಬರುವ ಮುನ್ನ ತಲಕಾಡು ಬಳಿ ಇವರ ಭಕ್ತಿಯನ್ನು ಮತ್ತೊಮ್ಮೆ ಪರೀಕ್ಷೆ ಮಾಡಲು ಇಡೀ ಭೂಮಿಯನ್ನು ತಕ್ಕಡಿಯ ಒಂದು ಭಾಗಕ್ಕೆ ಮತ್ತು ತಕ್ಕಡಿಯ ಮತ್ತೊಂದು ಭಾಗಕ್ಕೆ ಶ್ರೀ ಮೂಗಪ್ಪನವರನ್ನು ಇಟ್ಟು ತೂಕಮಾಡಿ ನೋಡಿದಾಗ ಭೂಮಿಗಿಂತಲು ಸ್ವಲ್ಪ ಮೂಗಪ್ಪನವರೇ ತುಸು ಭಾರವಿದ್ದದ್ದರಿಂದ ಅವರಿಗೆ ಶ್ರೀಮಹದೇಶ್ವರ ಸ್ವಾಮಿಯವರು ಭೂಮಿ ತೂಕದ ಮೂಗಪ್ಪ ಎಂದು ಹೇಳಿದ್ದಾಗಿ ಜಾನಪದ ಸಾಹಿತ್ಯದಲ್ಲಿ ಮತ್ತು ಸತ್ಯಕ್ಕೆ ಸರಗೂರು ಮಠ ನಿಜಕ್ಕೆ ಬೊಪ್ಪೇಗೌಡನಪುರ ಎಂಬ ವಾಕ್ಯ ಜಾನಪದ ಸಾಹಿತ್ಯಗಾರರ ಬಾಯಲ್ಲಿ ಸರ್ವೇ ಸಾಮಾನ್ಯವಾಗಿ ಕೇಳಬರುತ್ತದೆ. ಹಾಗಾಗಿ ಈ ಹುಟ್ಟು ಲಿಂಗವಂತನನ್ನು ಅಂದರೆ ಹುಟ್ಟುವಾಗಲೇ ಎದೆಯಲ್ಲಿ ದಿವ್ಯ ಪಂಚಕಳಸವನ್ನು ಹೊಂದಿರುವ (ಕಟ್ಟು ಲಿಂಗಾಧಾರಣೆ ಬೇರೆ) ಇವರನ್ನು ಹೇಗಾದರೂ ಮಾಡಿ ಒಕ್ಕಲು ಪಡೆಯಬೇಕು ಎಂದು ಹೇಳಿದ್ದು ಜಾನಪದ ಸಾಹಿತ್ಯದಲ್ಲಿ ಉಲ್ಲೇಖವಾಗಿದೆ. ಶ್ರೀ ಮಹದೇಶ್ವರರ ಅನುಗ್ರಹದಿಂದ ಶ್ರೀ ಮೂಗಪ್ಪನವರು ಕೊತ್ತೇಗಾಲ

ಗ್ರಾಮದ ಶ್ರೀ ದಾಸಪ್ಪ ಮತ್ತು ಬಲ್ಲಮ್ಮ ದಂಪತಿಗಳ ಸುಪುತ್ರಿಯಾದ ಶಿವಶರಣೆ ರಾಮವ್ವರನ್ನು ವಿವಾಹವಾಗಿ ನಂತರ ಶ್ರೀ ಮಹದೇಶ್ವರ ಸ್ವಾಮಿಯವರು ಸರಗೂರಪ್ಪನವರ ಕುಟುಂಬವನ್ನು ವಿಭಾಗ ಮಾಡಿ, ಶ್ರೀ ಮೂಗಪ್ಪ ರಾಮವ್ವರವರನ್ನು ಒಕ್ಕಲು ಪಡೆಯಲು ಅವರ ಸಂಸಾರದೊಳಗಿನ ಚಟುವಟಿಕೆಗಳನ್ನು ಖುದ್ದಾಗಿ ಗಮನಿಸಲು ಸ್ವತಃ ಮಹದೇಶ್ವರಸ್ವಾಮಿಯವರು ಸುಣ್ಣದ ಗೋಡೆಯ ಮೇಲೆ ಬಿಳಿ

ಹಲ್ಲಿಯಾಗಿ ವಾರಾನುಗಟ್ಟಲೆ ವಾಸಮಾಡಿದ್ದು ಉಲ್ಲೇಖವಿದೆ; ಶ್ರೀ

ಮಹದೇಶ್ವರರ ಸ್ವತಃ ವರ್ಣನೆಯಂತೆ, ಬೆಳ್ಳಿಬಾಗಿಲು, ಚಿನ್ನದಕಂಬ, ವಜ್ರದ ತೊಲೆಯಂತಹ ತೊಟ್ಟಿಮನೆಯ ಸಂಸಾರವನ್ನು ಶ್ರೀ ಮಹದೇಶ್ವರರು ಇಬ್ಬಾಗ ಮಾಡಿ ಶ್ರೀರಾಮವ್ವ ಮೂಗಪ್ಪರವರನ್ನು ತಮ್ಮ ಎಣ್ಣೆಮಜ್ಜನಕ್ಕೆ ಒಕ್ಕಲು ಪಡೆಯಲು ನಿರ್ಧಾರ ಮಾಡಿ, ಅವರು ಒಪ್ಪಲು ತಕರಾರು ಇದ್ದುದರಿಂದ ಅವರಿಗೆ ಶ್ರೀ ಮುಡುಕುತೊರೆ ಮಲ್ಲಪ್ಪ ಹಾಗೂ ಬಿಳಿಗಿರಂಗಸ್ವಾಮಿಯವರನ್ನು ಖುದ್ದು ಕರೆತಂದು ಸಂಧಾನ ಮಾಡಿದರೂ ಸಹ ವಿಫಲರಾಗಿ ನಂತರ ಅವರನ್ನು ಕಷ್ಟಕ್ಕೆ ಗುರಿಮಾಡಿ, ತಿನ್ನಲೂ ಸಹ ಪರಿತಪಿಸುವಾಗ ಮನೆಯಲ್ಲಿ ಹೊಟ್ಟೆ ತುಂಬಿಸಿಕೊಳ್ಳಲು ಇದ್ದ ರಾಗಿ ಅಂಬಲಿಯನ್ನು ಸಹ ಶ್ರೀ ಮುಡುಕುತೊರೆ ಮಲ್ಲಪ್ಪ, ಬಿಳಿಗಿರಿರಂಗಸ್ಥಾಮಿ, ಕೊಂಗಳ್ಳಿ ಮಲ್ಲಿಕಾರ್ಜುನಸ್ಥಾಮಿ, ಮೆಲುಕೋಟೆ ಚಲುವನಾರಾಯಣ ಸ್ವಾಮಿ ಮತ್ತು ರಾಡುಬಾಗಿಲ ಪರಶುರಾಮರೊಡಗೂಡಿ ಎಲ್ಲವನ್ನೂ ಕುಡಿದು ಖಾಲಿ ಮಾಡಿದ ಪ್ರಸಂಗ ಸಹ ಜಾನಪದ ಸಾಹಿತ್ಯದಲ್ಲಿ ಉಲ್ಲೇಖವಿದೆ. ನಂತರದಲ್ಲಿ ಅವರನ್ನು ಒಕ್ಕಲು ಪಡೆದು ಸ್ವತಃ ರಾಮವ್ವ ತಾಯಿಯು ನಮ್ಮ ಮೂಗಪ್ಪನವರನ್ನು ಒಬ್ಬರನ್ನೇ ನಿಮ್ಮ ಸೇವೆಗೆ ಕಳಿಸಲಾರೆ, ನಾನು ಸಹ ಜೊತೆ ಏಳುಮಲೆ ಕೈಲಾಸಕ್ಕೆ ಬರುವುದಾದರೆ ಮಾತ್ರ ಬರುವುದಾಗಿ ಹಠಮಾಡಿದಾಗ ಸರಿ ತಾಯಿ, ನಿನ್ನಿಂದ ನನ್ನ ಏಳುಮಲೆಗೆ ಹೆಣ್ಣುಮಕ್ಕಳು ಬರುವಂತಾಗಲಿ ಎಂದು, ಅವರಿಬ್ಬರನ್ನೂ ತಮ್ಮ ಎಣ್ಣೆಮಜ್ಜನ ಸೇವೆಗೆ ಒಕ್ಕಲಾಗಿ ಪಡೆದು, ಇಂದು ಎಲ್ಲಾ ಭಕ್ತರು ಸಂಸಾರ ಸಮೇತ ಶ್ರೀ ಮಹದೇಶ್ವರ ಸ್ವಾಮಿಯವರ ಸಹಜ ದರ್ಶನಕ್ಕೆ ಕಾರಣೀಭೂತರಾಗಿ ಶ್ರೀ ಮಹದೇಶ್ವರ ಸ್ವಾಮಿಯ ಇಂದಿನ ಆದಾಯಕ್ಕೆ ಅಡಿಪಾಯ ಹಾಕಿದ್ದಾರೆ.

ಇವರು ಎಲ್ಲಾ ಭಕ್ತರನ್ನು ಯಾವುದೇ ಬೇದಭಾವವಿಲ್ಲದೆ, "ಆಯಂ ನಿಜಾಃ ಪರವೇತಿ ಗಣನಾ ಲಘುಚೇತಸಾಂ, ಉದಾರಚರಿತಾನಾಂ ತು ವಸುದೈವ ಕುಟುಂಬಕಂ' ಎಂಬ ಮಾತಿನಂತೆ, ಸಿದ್ದಯ್ಯನಪುರದ ಕಡ್ಡಿಚಾಮಣ, ಬೆಸ್ತರ ಶಿಳ್ಳೆಕ್ಯಾತ, ಅಮಚವಾಡಿ ವಾದ್ಯ, ಗೂಳ್ಯದೊಡ್ಡಿ ಸುಬ್ಬೇಗೌಡರು ಅರಕೆರೆ,

ಬನ್ನೂರು ಭಾಗದ ಒಕ್ಕಲಿಗ ಸಮುದಾಯ, ತಲಕಾಡುವಿನ ಬಸ್ತಿಕೇರಿ ಧೂಪ, ಯಳಂದೂರಿನ ಹೊಂಬಾಳೆ, ಮಾಲಂಗಿಯ ಹನ್ನೆರಡು ಪಾವು ಎಳ್ಳು ಇತ್ಯಾದಿಗಳನ್ನು ಪಲ್ಲಕ್ಕಿಯ ಮೆರವಣಿಗೆಯಲ್ಲಿ ಹೋಗುತ್ತಿದ್ದದ್ದು ಜನರ ಬಾಯಲ್ಲಿ ಹಾಸುಹೊಕ್ಕಾಗಿದೆ. 1246ನೇ ಇಸವಿಯ ವೀರಬಲ್ಲಾಳರ ತಾಮ್ರ ಶಾಸನ ಹಾಗೂ ಬಹದ್ದೂರ್ ಹೈದರಾಲಿಖಾನ್‌ರವರ ತಾಮ್ರಶಾಸನದಲ್ಲೂ ಸಹ ಉಲ್ಲೇಖವಿದ್ದು, ಮೈಸೂರು ಅರಸರಿಂದ ಬೆಳ್ಳಿ ದವಾಲಿ ಪಡೆದಿರುವ ಉಲ್ಲೇಖವಿರುವ ಶರಣರಾಗಿದ್ದಾರೆ.

ಮಹದೇಶ್ವರರು ತಮ್ಮ ದೂರದೃಷ್ಟಿಯಿಂದ ತಮ್ಮ ಗುಡಿಗೆ ಪಶ್ಚಿಮದ ಬಾಗಿಲನ್ನು ನಿರ್ಮಿಸಿದ್ದು ಸಹ ಶ್ರೀರಾಮವ್ವ ಮತ್ತು ಮೂಗಪ್ಪರವರ ಪಡವಲು ಪರೀಕ್ಷೆಯನ್ನು ಕಣ್ಣಾರ ಕಾಣಲು ಎಂಬುದು ಸಹ ಆಲಂಬಾಡಿ ಜುಂಜೇಗೌಡರ ದೇವಾಲಯ ನಿರ್ಮಾಣಮಾಡುವ ಸನ್ನಿವೇಶದಲ್ಲಿ

ಬರುತ್ತದೆ. ಇದಲ್ಲದೆ ಎಣ್ಣೆಮಜ್ಜನದ ನಂತರ ಹುಲಿವಾಹನ ಉತ್ಸವ, ಹಾಲರವಿ, ರಥೋತ್ಸವವನ್ನು ನಡೆಸಿಕೊಂಡು ಬರುತ್ತಿದ್ದ ಶರಣರ ಸರಗೂರಿನಲ್ಲಿರುವ ಗದ್ದುಗೆಗಳು ಇಂದು ಸಹ ಎಲ್ಲಾ ಸಮುದಾಯದ ಭಕ್ತರುಗಳಿಂದ ನಿತ್ಯಪೂಜೆಗೊಳ್ಳುತ್ತಿವೆ. ಶ್ರೀ ಮೂಗಪ್ಪ ರಾಮವ್ವ ನಂತರದ ದೊಡ್ಡದಾಸಪ್ಪ ಬೃಂದಾವನ ಸಿದ್ದೇಶ್ವರ ಸ್ವಾಮಿಯವರ ದೇವಾಲಯಗಳು ಮುಖ್ಯವಾದವುಗಳಾಗಿವೆ. ಅದಲ್ಲದೆ ಸರಗೂರಿನಲ್ಲಿ ಶ್ರೀ ಮೂಗಪ್ಪ ರಾಮವ್ವ ತಾಯಿಯವರು ವಾಸವಿದ್ದ ಮನೆಯ ಎದುರುಗಡೆ ಶ್ರೀ ಮಹದೇಶ್ವರ ಸ್ಥಾಮಿಗೆ ಪ್ರಪ್ರಥಮವಾಗಿ ಎಣ್ಣೆಮಜ್ಜನ ಮಾಡಲು ನಿರ್ಮಿಸಿದ್ದ ಸರಗೂರಿನ ಮಜ್ಜನದ ಕೊಳ ಹಾಗೂ ಸರಗೂರಿನ ರಾಮವ್ವ ಕೊಳ, ಮೂಗಪ್ಪನವರ ಕೊಳ, ಅದಲ್ಲದೆ ಮಹದೇಶ್ವರ ಬೆಟ್ಟದ ರಂಗನ ಒಡ್ಡುವಿನ ಬಳಿ ಬರುವ ರಾಮವ್ವ ಕೊಳ, ಶ್ರೀಸ್ವಾಮಿಯ ಕ್ಷೇತ್ರದಲ್ಲಿ ಬರುವ ಎಣ್ಣೆಮಜ್ಜನ ಪ್ರಸಾದ ವಿತರಣೆ ಮಾಡುವ 'ದ್ದುಗೆಗಳನ್ನು ಜೀರ್ಣೋದ್ಧಾರ ಮಾಡಿ ಇಂದಿನ ಹಾಗೂ ಮುಂಬರುವ ಪೀಳಿಗೆಯವರಿಗೆ ಇತಿಹಾಸ ತಿಳಿಸುವುದು ಮುಖ್ಯವಾಗಿದೆ.